**ಓ.ಎಸ್. ನಂಃ 22/2017**

**ಪಿ.ಡಬ್ಲ್ಯೂಃ 2**

**ದಿನಾಂಕ 06.02.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಜಿ.ಎಲ್.ಡಿ ವಕೀಲರಿಂದಃ**

1. ಹಣ ವಸೂಲಿಗಾಗಿ ಈ ದಾವೆಯನ್ನು ಹೂಡಿರುತ್ತೇವೆ. ಇದೇ ಪ್ರತಿವಾದಿಯರ ವಿರುದ್ಧ ನಮ್ಮ ತಂದೆಯಾದ ಹಾಗೂ ಈ ದಾವೆಯ ಮೂಲ ವಾದಿಯಾಗಿದ್ದ ಕಾಳೇಗೌಡರು ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯ ಕೆ.ಆರ್.ನಗರದಲ್ಲಿ ಹಣ ವಸೂಲಿಗಾಗಿ ಅಸಲು ದಾವೆ ಸಂಖ್ಯೆ 23/2017 ರ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ನಮ್ಮ ತಂದೆಯ ಮರಣದ ನಂತರ ವಾದಿ ಸಂಖ್ಯೆ 1(ಎ) ರಿಂದ (ಎಫ್) ರವರು ಅಸಲು ದಾವೆ ಸಂಖ್ಯೆ23/17 ನ್ನು ನಡೆಸುತ್ತಿದ್ದೇವೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 23/17 ರಲ್ಲಿ ವಾದಿ ಸಂಖ್ಯೆ 1(ಎ) ರಿಂದ (ಎಫ್) ರಾದ ನಾವು ಹಾಜರಾಗಿ ದಾವೆಯನ್ನು ಮುಂದುವರೆಸುತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು 8 ನೇ ತರಗತಿಯವರೆಗೆ ಶಾಲೆ ಕಲಿತಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರುತ್ತದೆ ಎಂದರೆ ಸರಿ. ಸಾಕ್ಷಿಗೆ ಈಗ ಅಸಲು ದಾವೆ ಸಂಖ್ಯೆ 23/17 ರಲ್ಲಿ ಹಾಜರುಪಡಿಸಿರುವ ದಿನಾಂಕ 13.01.2014 ರ ಆನ್ ಡಿಮಾಂಡ್ ಪ್ರೊನೋಟ್ ನ ದೃಡಿಕೃತ ನಕಲನ್ನು ತೋರಿಸಿದ್ದು, ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ನಿಡಿ.1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಅಸಲು ದಾವೆ ಸಂಖ್ಯೆ 23/17 ರ ತಿದ್ದುಪಡಿ ವಾದಪತ್ರದ ದೃಡಿಕೃತ ನಕಲನ್ನು ತೋರಿಸಿ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ.2 ಎಂದು ಗುರುತಿಸಲಾಯಿತು.

3. ನಿಡಿ.2 ರ ದಾಖಲೆಯಲ್ಲಿ ವಾದಿ ಸಂಖ್ಯೆ 1(ಬಿ) ರವರಾದ ಗಾಯತ್ರಿ ಕೋಂ ಲೇಟ್ ರಮೇಶ ಇವರು ನನ್ನ ಖಾಸ ಅಕ್ಕ ಆಗಿರುತ್ತಾರೆ ಎಂದರೆ ಸರಿ. ನನ್ನ ಅಕ್ಕನಾದ ಗಾಯಿತ್ರಿ ಕೋಂ ರಮೇಶರವರು ಇದೇ ಪ್ರತಿವಾದಿಯರ ವಿರುದ್ಧ ನಿರ್ದಿಷ್ಟ ಪರಿಹಾರವನನ್ನು

ಕೋರಿ ಅಸಲು ದಾವೆ ಸಂಖ್ಯೆ 382/18 ರಂತೆ ದಾವೆಯನ್ನು ಹೂಡಿದ್ದರು ಎಂದರೆ ಸರಿ.

4. ನಿಪಿ.3 ರ ಪ್ರೊನೋಟ್ ನ್ನು ದಿಃ 16.01.2014 ರಂದು ಬರೆದುಕೊಟ್ಟಿರುತ್ತಾರೆ. ನಿಪಿ.3 ರ ಛಾಪಾ ಕಾಗದವನ್ನು ಪ್ರತಿವಾದಿಯರೇ 2013 ರಲ್ಲಿ ಖರೀದಿಸಿರುತ್ತಾರೆ. ನಿಡಿ.1 ರ ಛಾಪಾ ಕಾಗದವನ್ನು ದಿನಾಂಕ 13.01.2014 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿಯರು ನನ್ನ ತಂದೆಯಾದ ಕಾಳೇಗೌಡರವರಿಂದ 2016 ರಲ್ಲಿ 80 ಸಾವಿರ ರೂಪಾಯಿ ಹಣವನ್ನು 2017 ರಲ್ಲಿ 80 ಸಾವಿರ ರೂಪಾಯಿ ಹಣವನ್ನು 2 ಬಾರಿ ಪಡೆದಿದ್ದು, ಅದರ ಸಂಬಂದ ಬರೆದ ಪ್ರೊನೋಟ ನ ಛಾಪಾ ಕಾಗದವನ್ನು 2013 ರಲ್ಲಿ ಪ್ರತಿವಾದಿಯರು ಖರೀದಿಸಿದ್ದರು ಎಂದು ಸಾಕ್ಷಿಯು ನುಡಿದಿರುತ್ತಾರೆ. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ. ನಿಪಿ.3 ಮತ್ತು ನಿಡಿ.1 ರ ಛಾಪಾ ಕಾಗದಗಳನ್ನು ನನ್ನ ತಂದೆಯಾದ ಕಾಳೇಗೌಡರೇ 2013 ರಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ.

5. ಛಾಪಾ ಕಾಗದಗಳನ್ನು ಖರೀದಿಸಲು ನಿಗದಿತ ನಮೂನೆಯ ಅರ್ಜಿಯನ್ನು ಭರ್ತಿ ಮಾಡಿ ಕೊಡಬೇಕಾಗುತ್ತದೆ ಎಂದರೆ ಸರಿ. ಯಾವ ಉದ್ದೇಶಕ್ಕಾಗಿ ನಿಡಿ.1 ಮತ್ತು ನಿಪಿ.3 ರ ಛಾಪಾ ಕಾಗದಗಳನ್ನು ನೀವು ಖರೀದಿಸಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸದರಿ ಛಾಪಾ ಕಾಗದಗಳನ್ನು ನಾವು ಖರೀದಿಸಿರುವುದಿಲ್ಲ ಬದಲಾಗಿ ಪ್ರತಿವಾದಿಯರು ಖರೀದಿಸಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

6. ಸಾಕ್ಷಿಗೆ ಈಗ ದಿಃ 28.05.2016 ರ ನೊಂದಾಯಿತ ಕ್ರಯದ ಕರಾರು ಪತ್ರದ ದೃಡಿಕೃತ ನಕಲನ್ನು ತೋರಿಸಿದ್ದು, ಸದರಿ ದಾಖಲೆಯಲ್ಲಿರುವ ತಮ್ಮ ಸಹಿಗಳನ್ನು ಮತ್ತು ಪೊಟೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಡಿ.3 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ದಿಃ 19.02.2001 ರ ನೊಂದಾಯಿತ ಕ್ರಯದ ಕರಾರು ಪತ್ರದ ದೃಡಿಕೃತ ನಕಲನ್ನು ತೋರಿಸಿದ್ದು, ಸದರಿ ದಾಖಲೆಯಲ್ಲಿರುವ ತಮ್ಮ ತಂದೆಯವರಾದ ಕಾಳೇಗೌಡರ ಸಹಿಗಳನ್ನು ಮತ್ತು ಪೊಟೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಡಿ.4 ಎಂದು ಗುರುತಿಸಲಾಯಿತು.

7. ನನಗೆ ಈ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ಪ್ರತಿವಾದಿಯರಿಗೆ ನೋಟಿಸನ್ನು ನೀಡಿರುವುದಿಲ್ಲ. ನಿಪಿ.3 ರ ಪ್ರೊನೋಟನ್ನು ಬರೆಯುವಾಗ ಪತ್ರ ಬರಹಗಾರರಾದ ವಸಂತ್ ಕುಮಾರ, ಸಾಕ್ಷಿದಾರರಾದ ಪುನೀತ ಮತ್ತು ಲಕ್ಷ್ಮಣ ಹಾಗೂ ಪ್ರತಿವಾದಿಯರು ಹಾಜರಿದ್ದರು. ಪ್ರತಿವಾದಿಯರು ನಮ್ಮಿಂದಾಗಲೀ ಅಥವಾ ನಮ್ಮ ತಂದೆಯಿಂದಾಗಲೀ ಯಾವುದೇ ಸಾಲದ ಹಣವನ್ನು ಪಡೆದಿರುವುದಿಲ್ಲ ಹಾಗೂ ಎಂದಿಗೂ ಸಹ ನಿಪಿ.3 ಹಾಗೂ ನಿಡಿ.1ರ ದಾಖಲೆಗಳನ್ನು ನಮಗೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

8. ಈ ದಾವೆಯಲ್ಲಿ ಪ್ರತಿವಾದಿಯರು ಸಲ್ಲಿಸಿರುವ ಪ್ರತಿವಾದಪತ್ರದಲ್ಲಿ ಬರೆಸಿರುವ ವಿಷಯಗಳನ್ನು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ದಿಃ 14.01.2014 ರಲ್ಲಿ 80 ಸಾವಿರ ರೂಪಾಯಿ ಹಾಗೂ ದಿಃ 13.01.2014 ರಂದು 80 ಸಾವಿರ ರೂಪಾಯಿ ಹಣವನ್ನು ಪಡೆಯುವ ಯಾವುದೇ ಅಗತ್ಯ ಪ್ರತಿವಾದಿಯರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಬಳಿಯಾಗಲೀ ಅಥವಾ ನಮ್ಮ ಬಳಿಯಾಗಲೀ 1,60,000/- ಹಣ ಇತ್ತು ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು 1,60,000/- ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸದಿದ್ದರೂ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನನ್ನ ತಂದೆಯಾದ ಕಾಳೇಗೌಡರು ನಿಪಿ.3 ಹಾಗೂ ನಿಡಿ.1 ರ ಪತ್ರ ಬರಹಗಾರ ಮತ್ತು ಸಾಕ್ಷಿದಾರರೊಂದಿಗೆ ಶಾಮೀಲಾಗಿ ಮೋಸದಿಂದ ಸದರಿ ದಾಖಲೆಗಳನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. 2001 ರಲ್ಲಿ ನನ್ನ ತಂದೆಯಾದ ಕಾಳೇಗೌಡರು ಪ್ರತಿವಾದಿಯರಿಂದ ನಿಡಿ.4 ರ ಕ್ರಯದ ಕರಾರನ್ನು ಬರೆಸಿಕೊಂಡಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರತಿವಾದಿಯರು ನನ್ನ ತಂದೆಯವರಿಗೆ ಹಣವನ್ನು ಮರುಪಾವತಿ ಮಾಡಿದ ಕಾರಣ ನಿಡಿ.4 ರ ದಾಖಲೆಯನ್ನು ರದ್ದು ಮಾಡಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ.

10. ನನ್ನ ತಂದೆಯವರಾದ ಕಾಳೇಗೌಡರು, ನಾನು, ನನ್ನ ಅಕ್ಕನಾದ ಗಾಯಿತ್ರಿರವರು ಹಾಗೂ ನಮ್ಮ ಸಂಬಂಧಿಕರಾದ ಶಶಿಕಲಾ ರವರು ಬಡ್ಡಿಗೆ ಸಾಲದ ಹಣವನ್ನು ಕೊಟ್ಟು ಲೇವಾದೇವಿ ವ್ಯವಹಾರವನ್ನು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸುಮಾರು 10-15 ವರ್ಷಗಳಿಂದ ನಾವೆಲ್ಲ ಸೇರಿ ರೈತರಿಗೆ ಬಡ್ಡಿಗೆ ಹಣವನ್ನು ಕೊಟ್ಟು ಅವರಿಂದ ಜಮೀನುಗಳ ಸಂಬಂದ ಕ್ರಯದ ಕರಾರುಗಳನ್ನು ಬರೆಯಿಸಿ ನಂತರ ಬಡ್ಡಿ ಸಮೇತ ಹಣವನ್ನು ವಸೂಲು ಮಾಡಿದ ನಂತರ ಕ್ರಯದ ಕರಾರುಗಳನ್ನು ರದ್ದುಪಡಿಸುವ ಹವ್ಯಾಸ ಹೊಂದಿರುತ್ತೇವೆ ಎಂದರೆ ಸರಿಯಲ್ಲ.

11. ಶಶಿಕಲಾ ರವರು ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ. ಸದರಿ ಶಶಿಕಲಾರವರು ನಮ್ಮ ಸಂಬಂಧಿಕರಾಗಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಶಶಿಕಲಾರವರು ಇದೇ ಪ್ರತಿವಾದಿಯರ ವಿರುದ್ಧ ನಿರ್ದಿಷ್ಟ ಪರಿಹಾರವನ್ನು ಕೋರಿ ಸಲ್ಲಿಸಿದ್ದ ಅಸಲು ದಾವೆ ಸಂಖ್ಯೆ 116/19 ರ ದಾವೆಯು ವಜಾ ಆಗಿರುತ್ತದೆ ಎಂದರೆ ಸಾಕ್ಷಿಯು ಅವರಿಗೂ ನಮಗೂ ಯಾವುದೇ ಸಂಬಂಧವಿಲ್ಲ ಎಂದು ನುಡಿದಿರುತ್ತಾರೆ. ದಿಃ 13.01.2014 ರಂದು ನಿಡಿ.4 ರ ದಾಖಲೆಯನ್ನು ರದ್ದುಪಡಿಸುತ್ತೇನೆ ಎಂದು ಪ್ರತಿವಾದಿಯರನ್ನು ನಂಬಿಸಿ ಮೋಸದಿಂದ ಖಾಲಿ ಛಾಪಾ ಕಾಗದಗಳಿಗೆ ಪ್ರತಿವಾದಿಯರ ಸಹಿಗಳನ್ನು ಪಡೆದು ಸದರಿ ಛಾಪಾ ಕಾಗದಗಳನ್ನು ದುರುಪಯೋಗಪಡಿಸಿ ನನ್ನ ತಂದೆಯವರು ನಿಪಿ.3 ಮತ್ತು ನಿಡಿ.1 ರ ದಾಖಲೆಗಳನ್ನು ಸೃಷ್ಠಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ.3 ಮತ್ತು ನಿಡಿ.1 ರ ದಾಖಲೆಗಳನ್ನು ಪ್ರತಿವಾದಿಯರು ಒಂದೇ ದಿನದಂದು ನಮಗೆ ಬರೆದುಕೊಟ್ಟಿರುತ್ತಾರೆ ಎಂದು ಸಾಕ್ಷಿಯು ಸ್ವತಃ ನುಡಿದಿರುತ್ತಾರೆ.

12. ಸಾಕ್ಷಿಗೆ ಈಗ ದಿಃ 07.03.2011 ರ ನೊಂದಾಯಿತ ಕ್ರಯದ ಕರಾರು ಪತ್ರವನ್ನು ತೋರಿಸಿ ಅದರಲ್ಲಿ ಇರುವ ತಮ್ಮ ತಂದೆಯ ಪೊಟೋ ಮತ್ತು ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಡಿ.5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ದಿಃ 28.09.2007 ರ ನೊಂದಾಯಿತ ಕ್ರಯದ ಕರಾರು ಪತ್ರವನ್ನು ತೋರಿಸಿ ಅದರಲ್ಲಿ ಇರುವ ತಮ್ಮ ತಂದೆಯ ಪೊಟೋ ಮತ್ತು ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಡಿ.6 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ದಿಃ 15.05.2010 ರ ನೊಂದಾಯಿತ ಕ್ರಯದ ಕರಾರು ಪತ್ರವನ್ನು ತೋರಿಸಿ ಅದರಲ್ಲಿ ಇರುವ ತಮ್ಮ ತಂದೆಯ ಪೊಟೋ ಮತ್ತು ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಡಿ.7 ಎಂದು ಗುರುತಿಸಲಾಯಿತು.

13. ರೈತರಿಗೆ ಬಡ್ಡಿಗಾಗಿ ಸಾಲವನ್ನು ಕೊಟ್ಟು ಅದರ ಮರುಪಾವತಿಗಾಗಿ ನನ್ನ ತಂದೆಯವರಾದ ಕಾಳೇಗೌಡರು ನಿಡಿ.3 ರಿಂದ 7 ರ ದಾಖಲೆಗಳನ್ನು ಬರೆಸಿಕೊಂಡು ಬಡ್ಡಿ ಸಮೇತ ಹಣವನ್ನು ರೈತರಿಂದ ವಸೂಲಿ ಮಾಡಿದ ನಂತರ ತಾವು ಮಾಡಿಕೊಂಡಿರುವಂತಹ ದಾಖಲೆಗಳನ್ನು ರದ್ದುಪಡಿಸುವ ಹವ್ಯಾಸ ಹೊಂದಿದ್ದರು ಎಂದರೆ ಸರಿಯಲ್ಲ. ನಿಮ್ಮ ಕುಟುಂಬಸ್ಥರು 2011 ರಿಂದ ಇಲ್ಲಿಯವರೆಗೂ ಹಲವಾರು ವ್ಯಕ್ತಿಗಳೊಂದಿಗೆ ವಾರ್ಷಿಕ ಸುಮಾರು 70 ರಿಂದ 80 ಲಕ್ಷ ರೂಪಾಯಿಯಷ್ಟು ಹಣದ ಲೇವಾದೇವಿ ವ್ಯವಹಾರ ಮಾಡುವ ಬಗ್ಗೆ ಸರಕಾರಕ್ಕೆ ತೆರಿಗೆ ಕಟ್ಟುತ್ತಿದ್ದೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಮ್ಮ ಕುಟುಂಬ ಇಲ್ಲ ಕೇವಲ ನಾನು ಮತ್ತು ನನ್ನ ತಂದೆ ಮಾತ್ರ ನಮ್ಮ ಕುಟುಂಬದಲ್ಲಿ ಇದ್ದೇವೆ ಎಂದು ನುಡಿದಿರುತ್ತಾರೆ.

14. ನಾನು ಹಣವನ್ನು ವಸೂಲಿ ಮಾಡಲು ಪ್ರತಿವಾದಿಯರ ಮನೆಗೆ ಅಕ್ರಮವಾಗಿ ನುಗ್ಗಿ 2 ನೇ ಪ್ರತಿವಾದಿಯ ಹೆಂಡತಿಯಾದ ಅನುರಾಧ ರವರ ಸೀರೆ ಹಿಡಿದು ಏಳೆದಾಡಿ ಅವರೊಂದಿಗೆ ಜಗಳ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಅವರು ನನ್ನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಪ್ರಕರಣದಲ್ಲಿ ನಾನು ಠಾಣೆಗೆ ಹಾಜರಾಗಿ ಇನ್ನು ಮುಂದೆ ಪ್ರತಿವಾದಿಯರಿಗೆ ತೊಂದರೆ ಕೊಡಲ್ಲ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ತೊಂದರೆ ಕೊಡುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟ ಕಾರಣ ಪೋಲಿಸರು ಸದರಿ ಪ್ರಕರಣ ಮುಕ್ತಾಯಗೊಳಿಸಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಪ್ರತಿವಾದಿಯರು ತಮ್ಮ ಪ್ರತಿವಾದಪತ್ರದಲ್ಲಿ ತೆಗೆದುಕೊಂಡಿರುವ ಎಲ್ಲ ಪ್ರತಿರಕ್ಷೆಗಳ ಸಂಬಂದ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿದ್ದು, ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೊಡಲು ಯಾವುದೇ ಸಕಾರಣಗಳು ಕಂಡುಬರದಿದ್ದು, ಅದಾಗ್ಯೂ ಪ್ರತಿವಾದಿ ಪರ ವಕೀಲರ**

**ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ 300/- ರೂವನ್ನು ದಂಡವನ್ನು ವಿಧಿಸಿ ಮುಂದೂಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**